## ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ

ಸಿ ಸಿ ನಂ. 819/2015

ಸಾಕ್ಷಿಗೆ ದಿನಾಂಕ 25-07-2025 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 22 P.W.: 4

| | | |
|---|---|---|
| ಹೆಸರು | : | ಸೊಟ್ಟೆಪ್ಪನವರ ಅಂಜಿನಮ್ಮ |
| ಗಂಡನ ಹೆಸರು | : | ಲೇಟ್ ಹುಲುಗಪ್ಪ |
| ವಯಸ್ಸು | : | 58 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ಏಣಗಿ ಬಸಾಪುರ ಗ್ರಾಮ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ಆರೋಪಿ ನಮ್ಮ ಊರಿನವನು, ನನಗೆ ಪರಿಚಯ ಇರುತ್ತಾನೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಆರೋಪಿತನ ಮೇಲೆ ಏನು ಪ್ರಕರಣ ನಡೆದಿದೆ ಎನ್ನುವುದು ನನಗೆ ಗೊತ್ತಿಲ್ಲ. ನನಗೆ ಚಾಸಾ-1 ರಿಂದ 21 ಮತ್ತು 23 ರಿಂದ 26 ರವರು ನಮ್ಮ ಊರಿನವರು ಇರುತ್ತಾರೆ. ಅವರು ನನಗೆ ಪರಿಚಯ ಇರುತ್ತಾರೆ. ಯಾವುದೇ ಮು ಮಾಲುಗಳನ್ನು ನೋಡಿದರೆ ನನಗೆ ಗುರುತಿಸಲು ಆಗುವುದಿಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

(ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಲು ಕೇಳಿಕೊಂಡಿದ್ದು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸ. ಸ. ಅಭಿಯೋಜಕರವರಿಂದಃ-

ಆರೋಪಿತನು ನನಗೆ ಬರುವಂತಹ ಸಂಪೂರ್ಣ ವಿಧವಾ ವೇತನವನ್ನು ನನಗೆ ಕೊಡುತ್ತಿರಲಿಲ್ಲ, ಈ ವಿಚಾರ ನಾನು ಅವನಿಗೆ ಕೇಳಿದರೆ ಅವನು ನನಗೆ ಗಧರಿಸುತ್ತಿದ್ದ ಅದೇ ರೀತಿ ನಮ್ಮ ಗ್ರಾಮದ ಹಲವು ಫಲಾನುಭವಿಗಳಿಗೆ ಸಹಾ ಸರಿಯಾದ ರೀತಿಯದಲ್ಲಿ ಹಅವನ್ನು ವಿತರಿಸುತ್ತಿರಲಿಲ್ಲವೆಂದರೆ ಸರಿಯಲ್ಲ. ಆರೋಪಿತನು ಈ ರೀತಿ ವಂಚನೆ ಮಾಡುತ್ತಿದ ಅಂತಾ ಮತ್ತು ಚಾಸಾ-4 ರವರಿಗೆ ಚುಡಾಯಿಸಿದ ವಿಚಾರಕ್ಕಾಗಿ ದಿಃ 06-12-2013 ರಂದು ಚಾಸಾ-1 ಮತ್ತು ಚಾಸಾ-7 ರವರ ಹಾಗೂ ಆರೋಪಿತನ ನಡುವೆ ಗಲಾಟೆಯಾಯಿತು, ಆರೋಪಿತನು ಚಾಸಾ-1, 7 ರವರಿಗೆ ಕಲ್ಲುಗಳಿಂದ ಹಲ್ಲೆ ಮಾಡಿರುತ್ತಾನೆ, ಅಡ್ಡಗಟ್ಟಿ ನಿಲ್ಲಿಸಿರುತ್ತಾನೆ, ಪ್ರಾಣ ಬೆದರಿಕೆ ಹಾಕಿರುತ್ತಾನೆ, ಕೈಗಳಿಂದ ಹೊಡೆಬಡಿ ಮಾಡಿರುತ್ತಾನೆ ಆ ಬಗ್ಗೆ ಚಾಸಾ-1 ರವರು ದೂರು

ನೀಡಿರುವ ವಿಚಾರ ನನಗೆ ತಿಳಿಯಿತು ಎಂದರೆ ಸರಿಯಲ್ಲ. ಮೇಲ್ಕಂಡ ಘಟನೆಯ ಕುರಿತು ನಾನು ದಿಃ 02-07-2014 ರಂದು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-11 ಎಂದು ಗುರುತಿಸಲಾಯಿತು. ಎಲ್ಲಾ ವಿಚಾರ ನನಗೆ ಗೊತ್ತಿದ್ದರೂ ಸಹಾ ಆರೋಪಿತನು ನಮ್ಮ ಗ್ರಾಮದವನಾಗಿರುವುದರಿಂದ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲು. ಆರೋಪಿ ಪರ ವಕೀಲರಿಂದಃ- ಇಲ್ಲ

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ